ಪ್ರಕಟಣೆ

ಅಧ್ಯಕ್ಷರು.—ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮಂತ್ತು ನಡವಳಿಕೆಯ ೯ನೇ ನಿಯಮದ ಮೇರೆಗೆ ಈ ಕೆಳಕಂಡ ಆರು ಜನ ಮಾನ್ಯ ಸದಸ್ಯರನ್ನು ಅಧ್ಯಕ್ಷತೆ ವಹಿಸಲು ನಾಮನಿರ್ದೇಶನ ಮಾಡಿರುತ್ತೇನೆ.

೧. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್
೨. ಶ್ರೀ ಎಂ. ಎಸ್. ನಾರಾಯಣರಾವ್
೩. ಶ್ರೀ ಎಚ್. ಟಿ. ಕೃಷ್ಣಪ್ಪ
೪. ಶ್ರೀ ಡಿ. ಟಿ. ಜಯಕುಮಾರ್
೫. ಶ್ರೀಮತಿ ಮುಕ್ತರುನ್ನೀಸಾ
೬. ಶ್ರೀ ಎಂ. ಬ್ಲೇಸಿಯಸ್ ಡಿಸೌಜ

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ನನ್ನ ಮುಂದೆ ಇರುವಂಥ ೨೧೮ನೇ ಪ್ರಶ್ನೆಗೆ ಉತ್ತರ ಬಂದಿಲ್ಲ.

ಶ್ರೀ ಲಕ್ಷ್ಮೀನರಸಿಂಹಯ್ಯ (ಮಾನ್ಯ ವಿದ್ಯುತ್ ಖಾತೆ ರಾಜ್ಯ ಸಚಿವರು).—ಉತ್ತರ ಬರುತ್ತದೆ, ನಾನು ಹೇಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ,—ಉತ್ತರ ಬರದೇಹೋದರೆ ಪ್ರಶ್ನೆ ಕೇಳುವುದು ಹೇಗೆ ? ಪ್ರತಿ ಉತ್ತರವನ್ನು ಹೇಗೆ ತೆಗೆದುಕೊಳ್ಳುವುದು ?

ಅಧ್ಯಕ್ಷರು.—೨೨೫ ಉತ್ತರದ ಪ್ರತಿಗಳನ್ನು ಕಳುಹಿಸಿಕೊಡಿ, ಸದಸ್ಯರಿಗೆಲ್ಲಾ ಕೊಡಬೇಕು ಎಂದು ಚೀಫ್ ಸೆಕ್ರೆಟರಿಯವರಿಗೆ ನಾನು ಪತ್ರ ಬರೆದಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಪ್ರಶ್ನೆ ಪ್ರಿಂಟಾಗಿ ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ; ಆದರೆ ಅವರ ಹತ್ತಿರ ಕಾಪಿ ಇಲ್ಲ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು.—ನಿನ್ನೆಯೇ ಉತ್ತರ ತರಿಸಿಕೊಂಡು ನೀವು ಸ್ವಡಿ ಮಾಡಬೇಕು. ನೀವು ಆ ಸಬ್ಜೆಕ್ಟ್ ವಲ್ಲಿ ಮಾಸ್ಟರ್ ಆಗಬೇಕು. ಉತ್ತರ ಕೊಟ್ಟಿಲ್ಲ ಎಂದರೆ ಹೇಗೆ ? ಹಿಂದಿನ ದಿವಸವೇ ಸೆಕ್ರೆಟೇರಿಯಟ್‌ಗೆ ಹೇಳಿ ತರಿಸಿಕೊಳ್ಳಬೇಕು. ಮೊದಲೇ ತರಿಸಿಕೊಂಡರೆ ನಿಮಗೆ ಸ್ವಡಿ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ನಿಮಗೆ ಉತ್ತರ ಬಂದಿದೆಯೋ ಇಲ್ಲವೋ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಇಲ್ಲ ಸಾರ್.

ಅಧ್ಯಕ್ಷರು.—ಹಾಗಾದರೆ ಇದನ್ನು ಆಮೇಲೆ ತೆಗೆದುಕೊಳ್ಳೋಣ. ಮುಂದಿನ ಪ್ರಶ್ನೆಯನ್ನು ನಂಜಯ್ಯನಮಠ್ ಅವರೇ ಕೇಳಿ.

ಕೈಮಗ್ಗ ನಿರ್ದೇಶನಾಲಯದ ಬಗ್ಗೆ

೯೬ **ಶ್ರೀ ಎಸ್. ಜಿ. ನಂಜಯ್ಯನ ಮಠ್ (ಗಂಳೇದಗುಡ್ಡ).**—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೈಮಗ್ಗ ವಿಭಾಗಕ್ಕಾಗಿ ಪ್ರತ್ಯೇಕ ನಿರ್ದೇಶನಾಲಯವನ್ನು ರಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ :

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ರಚಿಸಲಾಗುವುದು ?